**11/07/23** ಪ್ರಾತಃಮುರುಳಿ ಓಂಶಾಂತಿ ಬಾಪ್ದಾದಾ ಮಧುಬನ

"ಮಧುರ ಮಕ್ಕಳೇ- ಅಂತರ್ಮುಖಿಗಳಾಗಿ ವಿದ್ಯೆಯಲ್ಲಿ ತತ್ಪರರಾಗಿರಿ, ಶ್ರೀಮತದಂತೆ ಸದಾ ನಡೆಯುತ್ತಿದ್ದಾಗ ನಿಮ್ಮ ಅದೃಷ್ಟವು ಬಹಳ ಶ್ರೇಷ್ಠವಾಗುವುದು, ಇದು ತಮ್ಮ ಅದೃಷ್ಟವನ್ನು ರೂಪಿಸಿಕೊಳ್ಳುವ ಸಮಯವಾಗಿದೆ"

ಪ್ರಶ್ನೆ: ನೀವು ಮಕ್ಕಳದು ಶ್ರೇಷ್ಠವಾದ ಅದೃಷ್ಟ ಯಾವುದಾಗಿದೆ, ಅದರ ಆಧಾರದ ಮೇಲೆ ಇಡೀ ಸೃಷ್ಟಿಯ ಅದೃಷ್ಠವನ್ನು ತಿಳಿದುಕೊಂಡಿದ್ದೀರಿ?

ಉತ್ತರ: ಸ್ವದರ್ಶನ ಚಕ್ರಧಾರಿಗಳಾಗುವುದು ಎಲ್ಲದಕ್ಕಿಂತ ಶ್ರೇಷ್ಠಾತಿಶ್ರೇಷ್ಠ ಅದೃಷ್ಟವಾಗಿದೆ. ನೀವು ಬ್ರಾಹ್ಮಣರು ಈಗ ಸ್ವದರ್ಶನ ಚಕ್ರಧಾರಿಗಳಾಗಿದ್ದೀರಿ. ನೀವು ತಮ್ಮ ಅದೃಷ್ಟವನ್ನು ತಿಳಿದುಕೊಂಡಿದ್ದೀರಿ ಅಂದಾಗ ಇಡೀ ಸೃಷ್ಟಿಯ ಅದೃಷ್ಟವನ್ನು ತಿಳಿದುಕೊಂಡಿದ್ದೀರಿ. ನೀವು ಮಕ್ಕಳಿಗೆ ವಜ್ರಸಮಾನ ಅದೃಷ್ಟವನ್ನು ರೂಪಿಸಲು ತಂದೆಯು ಬಂದಿದ್ದಾರೆ. ಸ್ವಯಂ ಭಗವಂತನೇ ನಮ್ಮ ಅದೃಷ್ಠವನ್ನು ರೂಪಿಸಲು ವಿದ್ಯೆಯನ್ನು ಓದಿಸುತ್ತಿದ್ದಾರೆ ಅಂದಾಗ ಅದೃಷ್ಟವು ರೂಪುಗೊಳ್ಳುತ್ತದೆಯೆಂದು ಸ್ಮೃತಿಯಲ್ಲಿರಬೇಕು.

ಗೀತೆ: ಬರುವಂತಹ ನಾಳೆಗೆ ನೀವು.............

ಓಂ ಶಾಂತಿ. ಮಕ್ಕಳು ಗೀತೆಯ ಎರಡು ಶಬ್ದವನ್ನು ಕೇಳಿದಿರಿ. ಕೇಳುವುದರಿಂದಲೇ ತಮ್ಮ ಅದೃಷ್ಟದ ನಶೆಯು ಏರಬೇಕಾಗಿದೆ. ಈ ಅವಿನಾಶಿ ನಶೆಯು ಎಂದೂ ಸಹ ಕೆಳಗಿಳಿಯಬಾರದು. ಕೆಲವು ಮನುಷ್ಯರು ಸಾಹುಕಾರ ಪದಮಾಪತಿಗಳಾಗಿದ್ದಾಗ ಅವರಿಗೆ ಹಗಲು-ರಾತ್ರಿ ನಾನು ಅತಿದೊಡ್ಡ ಶ್ರೀಮಂತ, ಜಾಗಿರ್ದಾರ್ದರ್ಎಂಬ ನಶೆಯಿರುತ್ತದೆ. ಸಂಪತ್ತಿನ ನಶೆಯೇರಿರುತ್ತದೆ ಅಂದಾಗ ತಂದೆಯು ನಿಮ್ಮ ಅದೃಷ್ಟವನ್ನು ರೂಪಿಸುವವರಾಗಿದ್ದಾರೆ. ಈಗ ನಿಮ್ಮ ಅದೃಷ್ಟವು ತುಂಡಾಗಿದೆ, ಕವಡೆಯ ಸಮಾನವಾಗಿದೆಯೋ ಅಥವಾ ವಜ್ರಸಮಾನ ಅದೃಷ್ಟವಾಗಿದೆಯೋ ಎನ್ನುವುದನ್ನು ಈಗ ನೀವು ಪರೀಕ್ಷೆ ಮಾಡಿಕ್ಕೊಳ್ಳಬಹುದು. ಬೇಹದ್ದಿನ ತಂದೆಯು ಸನ್ಮುಖದಲ್ಲಿ ಕುಳಿತು ಅದೃಷ್ಟವನ್ನು ರೂಪಿಸುತ್ತಾರೆ, ಇದನ್ನು ಈಗ ನೀವು ನೋಡುತ್ತಿದ್ದೀರಿ ಹಾಗೂ ತಿಳಿದಿದ್ದೀರಿ. ಪರಮಪಿತ ಪರಮಾತ್ಮನನ್ನು ನೋಡುತ್ತೀರೋ ಅಥವಾ ತಿಳಿದುಕೊಳ್ಳುತ್ತೀರೋ? ನಾನಾತ್ಮನಾಗಿದ್ದೇನೆ ಎನ್ನುವುದು ನೀವು ಮಕ್ಕಳಿಗೆ ತಿಳಿದಿದೆ. ಭಲೆ ಆತ್ಮವನ್ನು ನೋಡುವುದಿಲ್ಲ ಆದರೆ ನಾನಾತ್ಮನಾಗಿದ್ದೇನೆ, ನಕ್ಷತ್ರ ಸಮಾನವಾಗಿದ್ದೇನೆ ಎಂದು ನಿಶ್ಚಯವಿದೆ. ಭೃಕುಟಿಯ ಮಧ್ಯದಲ್ಲಿದ್ದೇನೆ, ಈ ಸಮಯದಲ್ಲಿ ನೀವು ಮಕ್ಕಳು ಆತ್ಮಾಭಿಮಾನಿಯಾಗಬೇಕು. ಈ ದೇಹದಲ್ಲಿರುವಂತಹ ಆತ್ಮ ಅಥವಾ ದೇಹೀ ಎಂದು ಹೇಳಲಾಗುತ್ತದೆ. ನಮಗೆ ಪರಮಪಿತ ಪರಮಾತ್ಮನು ಸಿಕ್ಕಿದ್ದಾರೆಂದು ಆತ್ಮಕ್ಕೆ ಅಭಿಮಾನವಿದೆ. ಮಕ್ಕಳು ತಂದೆಯ ಬಳಿ ಜನ್ಮವನ್ನು ತೆಗೆದುಕೊಂಡಾಗ ಅಧಿಕಾರಿಗಳಾಗುತ್ತಾರೆ ನಂತರ ಕೆಲವರು ನಯಾ ಪೈಸೆಯ ಅದೃಷ್ಟವನ್ನು ಮಾಡಿಕೊಳ್ಳುತ್ತಾರೆ, ಕೆಲವರು ಏನನ್ನೂ ಸಹ ಮಾಡಿಕೊಳ್ಳುವುದಿಲ್ಲ ಕೇವಲ ಜನ್ಮವನ್ನು ತೆಗೆದುಕೊಳ್ಳುತ್ತಾರೆ. ಕೆಲಕೆಲವರಿಗೆ 5-6 ಮಕ್ಕಳಿದ್ದಾರೆ. ಕೆಲಸವು ಕಡಿಮೆ ಸಿಕ್ಕಿದಾಗ ನಮ್ಮ ಅದೃಷ್ಟದಲ್ಲಿ ಹೀಗಿದೆ ಎಂದು ತಿಳಿಯುತ್ತಾರೆ. ಬೇರೆಯವರ ಅದೃಷ್ಟದಲ್ಲಿ ಎಷ್ಟೊಂದು ಮಹಲು-ಮಹಡಿಗಳು, ಕಿರೀಟ ಹಾಗೂ ಸಿಂಹಾಸನವಿದೆ ಎಂದು ಅನ್ಯರನ್ನು ನೋಡುತ್ತಾರೆ. ಮನುಷ್ಯರ ಅದೃಷ್ಟವು ಭಿನ್ನವಾಗಿದೆ ಅಂದಾಗ ಈಗ ನೀವು ತಮ್ಮ ಅದೃಷ್ಟವನ್ನು ತಿಳಿದುಕೊಂಡಿದ್ದೀರಿ- ನಾವು ಯಾವ ಪ್ರಕಾರದ ಅದೃಷ್ಟಕ್ಕೋಸ್ಕರ ಪುರುಷಾರ್ಥವನ್ನು ಮಾಡುತ್ತಿದ್ದೇವೆ. ಹಣಕ್ಕಾಗಿ, ಸುಖಕ್ಕಾಗಿ ಮನುಷ್ಯರು ಪುರುಷಾರ್ಥವನ್ನು ಮಾಡುತ್ತಿದ್ದಾರೆ. ಶ್ರೀಮಂತ ಮನುಷ್ಯರಿಗೆ ಖಾಯಿಲೆ ಬಂದಾಗ ಒಳ್ಳೊಳ್ಳೆಯ ವೈದ್ಯರು ಔಷಧಿಯನ್ನು ಕೊಡುತ್ತಾರೆ. ಹಣದಿಂದ ಒಳ್ಳೆಯ ಔಷಧಿ ಸಿಗುತ್ತದೆಯೆಂದು ತಿಳಿದುಕೊಳ್ಳುತ್ತಾರೆ ಅಂದಾಗ ಹಣದ ಮಾತಾಯಿತಲ್ಲವೆ ಆದರೆ ನೀವು ಶ್ರೀಮತದಿಂದ ಬಹಳ ದೊಡ್ಡ ಅದೃಷ್ಟವನ್ನು ಮಾಡಿಕೊಳ್ಳುತ್ತಿದ್ದೀರಿ. ಸರ್ವಶ್ರೇಷ್ಠ ಅದೃಷ್ಟವನ್ನು ಮಾಡುತ್ತಿದ್ದಾರೆ ಏಕೆಂದರೆ ಸ್ವಯಂ ತಂದೆ ಶ್ರೇಷ್ಠವಾಗಿದ್ದಾರೆ ಎಂದು ನೀವು ಮಕ್ಕಳಿಗೆ ತಿಳಿದಿದೆ. ಈಗ ನೀವು ಅವರ ಸನ್ಮುಖದಲ್ಲಿ ಕುಳಿತಿದ್ದೀರಲ್ಲವೆ. ತಾಯಿ-ತಂದೆಯ ಮನೆಯಲ್ಲಿ ಕುಳಿತಿದ್ದೀರಿ. ಕೆಲವರು ರಾಜ-ರಾಣಿಯರು ನಾವು ಇಂತಹ ಕರ್ಮ ಮಾಡಿರುವುದರಿಂದ ನಮಗೆ ರಾಜ್ಯಭಾಗ್ಯದ ಅದೃಷ್ಠ ಸಿಕ್ಕಿದೆ ಎಂದು ತಿಳಿದುಕೊಳ್ಳುತ್ತಾರೆ. ನಾವು ಈ ಲಕ್ಷ್ಮೀ-ನಾರಾಯಣರ ಚಿತ್ರವನ್ನು ನೋಡಿದಾಗ ಅವಶ್ಯವಾಗಿ ಹಿಂದಿನ ಜನ್ಮದಲ್ಲಿ ಅದೃಷ್ಟವನ್ನು ಮಾಡಿಕೊಂಡಿದ್ದಾರೆ ಎಂದು ನೀವು ಮಕ್ಕಳಿಗೆ ತಿಳಿದಿದೆ. ನಿಮಗೆ ಈಗ ಈ ಬುದ್ಧಿಯು ಸಿಕ್ಕಿದೆ ಆದರೆ ಮನುಷ್ಯರ ಬುದ್ಧಿಯಲ್ಲಿ ಬರುವುದಿಲ್ಲ. ಎಷ್ಟೊಂದು ಶ್ರೀಮಂತ ಮನುಷ್ಯರಿದ್ದರೂ ಅವರಿಗೆ ಈ ಅದೃಷ್ಟವು ಎಲ್ಲಿಂದ ಸಿಗುತ್ತದೆ? ಹಿಂದಿನ ಜನ್ಮದಲ್ಲಿ ಆ ರೀತಿ ಕರ್ಮ ಮಾಡಿರುವುದರಿಂದ ಇಷ್ಟೊಂದು ಶ್ರೀಮಂತರಾಗಿದ್ದಾರೆಂದು ಹೇಳುತ್ತಾರೆ. ಕರ್ಮದ ಫಲವಾಗಿದೆಯಲ್ಲವೆ. ಕರ್ಮಗಳ ಗತಿ ಭಿನ್ನವಾಗಿದೆ ಎಂದು ಗಾಯನ ಮಾಡುತ್ತಾರೆ. ಮನುಷ್ಯರು ಹಿಂದಿನ ಕರ್ಮಗಳನುಸಾರ ಭೋಗಿಸುತ್ತಾರೆ. ಈಗ ನೀವು ಅತಿದೊಡ್ಡ ಲಕ್ಷ್ಮಿ-ನಾರಾಯಣರ ಅದೃಷ್ಟವನ್ನು ಹೋಲಿಕೆ ಮಾಡುತ್ತೀರಿ. ಈಗ ಯಾರು ಸತ್ಯಯುಗದ ಮಾಲೀಕರಾಗಿದ್ದಾರೋ ಅವರು ವಿಶ್ವದ ಮಾಲೀಕರಾಗಿದ್ದರು ಅಂತಹವರ ಕರ್ಮದ ಗತಿಯನ್ನು ಯಾರು ಮಾಡಿದರು? ನೀವು ಇಡೀ ಸೃಷ್ಟಿಚಕ್ರವನ್ನು ತಿಳಿದುಕೊಂಡಿದ್ದೀರಿ.

ನೀವು ಬ್ರಾಹ್ಮಣರು ಈಗ ಸ್ವದರ್ಶನ ಚಕ್ರಧಾರಿಗಳಾಗಿದ್ದೀರಿ. ಬೇರೆ ಬ್ರಾಹ್ಮಣರು ಸ್ವದರ್ಶನ ಚಕ್ರಧಾರಿಗಳಾಗುವುದಿಲ್ಲ. ಅವರೂ ಬ್ರಾಹ್ಮಣರೇ, ನೀವೂ ಬ್ರಾಹ್ಮಣರೇ ಆಗಿದ್ದೀರಿ ಆದರೆ ನೀವು ಸತ್ಯವಾದ ಬ್ರಾಹ್ಮಣರಾಗಿದ್ದೀರಿ ಎಂದು ನಿಮಗೆ ತಿಳಿದಿದೆ. ಬ್ರಹ್ಮಾನ ಮುಖವಂಶಾವಳಿ ಆಗಿದ್ದೀರಿ ಅಂದಾಗ ಅವಶ್ಯವಾಗಿ ಬ್ರಹ್ಮನೂ ಸಹ ಯಾರ ಮಗುವಾಗಿದ್ದಾರೆ. ಅವರು ಶಿವತಂದೆಯ ಮಗುವಾಗಿದ್ದಾರೆ. ಶಿವತಂದೆಯು ರಚಯಿತನಾಗಿದ್ದಾರೆ, ಅವರ ತಂದೆ ಬೇರೆ ಯಾರೂ ಇಲ್ಲ ಅಂದಾಗ ಈಗ ನಿಮ್ಮ ಅದೃಷ್ಟವನ್ನು ಪರಮಪಿತ ಪರಮಾತ್ಮ ಮಾಡುತ್ತಾರೆ. ತಂದೆಯಿಂದಲೇ ಅದೃಷ್ಟವಾಗುತ್ತದೆ. ತಾತ, ಚಿಕ್ಕಪ್ಪ, ಮಾಮ ಮುಂತಾದವರಿಂದ ಆಗುವುದಿಲ್ಲ ಆದರೆ ಕೆಲವರದು ಆಗುತ್ತದೆ ಒಂದುವೇಳೆ ಅವರು ದತ್ತು ತೆಗೆದುಕೊಂಡರೆ ಮಾತ್ರ. ನಾಟಕದನುಸಾರ ಕಲ್ಪದ ಮೊದಲಿನ ರೀತಿ ನೀವು ಮಕ್ಕಳನ್ನು ದತ್ತು ತೆಗೆದುಕೊಂಡಿದ್ದಾರೆ. ಅವರಿಗಿಂತ ಶ್ರೇಷ್ಠರಾಗಿರುವಂತಹವರು ಬೇರೆ ಯಾರೂ ಇಲ್ಲ. ಪ್ರಜಾಪಿತ ಬ್ರಹ್ಮನಿಗೆ ಅನೇಕಾನೇಕ ಎಷ್ಟೆಲ್ಲಾ ಮಕ್ಕಳಿದ್ದಾರೆ. ಅವರಿಗೆ ತಂದೆಯಿಂದ ಯಾವ ಆಸ್ತಿಯು ಸಿಗುತ್ತದೆ. ಶಿವತಂದೆಯು ಎಲ್ಲಾ ಆತ್ಮಗಳ ತಂದೆಯಾಗಿದ್ದಾರೆ ಮತ್ತು ಎಲ್ಲಾ ಜೀವಾತ್ಮಗಳ ತಂದೆ ಬ್ರಹ್ಮನಾಗಿದ್ದಾರೆಂದು ನೀವು ಮಕ್ಕಳಿಗೆ ತಿಳಿದಿದೆ. ನೀವು ಇದರಲ್ಲಿ ಸಹೋದರ-ಸಹೋದರಿಯರಾಗುತ್ತೀರಿ. ನೋಡಿ, ನಿಮ್ಮ ಅದೃಷ್ಟವು ಎಷ್ಟೊಂದು ಶ್ರೇಷ್ಠವಾಗಿದೆ ಎಂದು ತಂದೆಯು ನಿಮಗೆ ಹೇಳುತ್ತಾರೆ. ನಾನು ನಿಮ್ಮನ್ನು ಓದಿಸಿ ಎಷ್ಟೊಂದು ಅದೃಷ್ಟವಂತರನ್ನಾಗಿ ಮಾಡುತ್ತೇನೆ. ಅವಶ್ಯವಾಗಿ ಸತ್ಯಯುಗದ ಆದಿಯಲ್ಲಿ ಶ್ರೀಲಕ್ಷ್ಮೀ-ನಾರಾಯಣರು ಹಾಗೂ ಈ ಸ್ವರ್ಗವಾಸಿಗಳ ರಾಜಧಾನಿಯಿತ್ತು. ಅವರ ಅದೃಷ್ಟವು ಎಷ್ಟೊಂದು ಶ್ರೇಷ್ಠವನ್ನಾಗಿ ಮಾಡಿದ್ದಾರೆ. ಶಿವತಂದೆಯೇ ಅವರ ಅದೃಷ್ಟವನ್ನು ಭೋಗಿಸಿ 84 ಜನ್ಮಗಳನ್ನು ಪೂರ್ಣ ಮಾಡಿದ್ದಾರೆ. ಈಗ ಪುನಃ ಅವರೇ ಅದೃಷ್ಟವನ್ನು ರೂಪಿಸುತ್ತಿದ್ದಾರೆ. ಈ ಜ್ಞಾನವು ನಿಮ್ಮ ಬುದ್ಧಿಯಲ್ಲಿದೆ. ಜ್ಞಾನಸಾಗರ ತಂದೆಯನ್ನು ಬಿಟ್ಟರೆ ಬೇರೆ ಯಾರೂ ತಿಳಿಸಲು ಸಾಧ್ಯವಿಲ್ಲ. ಈ ತಂದೆಯು ಎಷ್ಟೊಂದು ಮುದ್ದಾಗಿದ್ದಾರೆ. ನೀವೂ ಸಹ ಮುದ್ದಾದ ಮಕ್ಕಳಾಗಿದ್ದೀರಿ ಎಂದು ತಂದೆಯು ಹೇಳುತ್ತಾರೆ. ನಿರಂತರವಾಗಿ ನನ್ನೊಬ್ಬನನ್ನು ನೆನಪು ಮಾಡುವ ಅಭ್ಯಾಸ ಮಾಡಿದಾಗ ನಿಮ್ಮ ವಿಕರ್ಮ ವಿನಾಶವಾಗುತ್ತದೆ ಎಂದು ನಿಮಗೆ ಆದೇಶವನ್ನು ಕೊಡುತ್ತೇನೆ. ಶಿವತಂದೆಯು ಈಗ ಬ್ರಹ್ಮಾರವರ ತನುವಿನ ಮೂಲಕ ಸನ್ಮುಖದಲ್ಲಿದ್ದಾರೆ. ತಂದೆಯು ತಿಳಿಸುತ್ತಿದ್ದಾರೆ- ನಾನು ಸದಾ ನಿರಾಕಾರನಾಗಿದ್ದೇನೆ. ನನ್ನ ಹೆಸರಂತೂ ಶಿವ ಎಂದಾಗಿದೆ. ನಾನು ಸಾಕಾರದಲ್ಲಿ ಬಂದು ಪುನರ್ಜನ್ಮವನ್ನು ತೆಗೆದುಕೊಳ್ಳುವುದಿಲ್ಲ. ಈಗಲೇ ನಾನು ಬಂದಿದ್ದೇನೆ, ಯಾರು ಮಾತನಾಡುತ್ತಿದ್ದಾರೆ ಎಂದು ನಿಮಗೆ ತಿಳಿದಿದೆ ಆದ್ದರಿಂದ ನಿಮ್ಮ ಬುದ್ಧಿಯು ಮೇಲೆ ಹೋಗುತ್ತದೆ. ಅವರು ನಿರಾಕಾರ ಪರಮಪಿತ ಪರಮಾತ್ಮ ಜ್ಞಾನಸಾಗರನಾಗಿದ್ದಾರೆ. ಅವರೇ ಅದೃಷ್ಟವನ್ನು ರೂಪಿಸುವವರಾಗಿದ್ದಾರೆ. ಸ್ವರ್ಗದ ರಚಯಿತ ತಂದೆಯು ಸ್ವರ್ಗವನ್ನು ಸ್ಥಾಪನೆ ಮಾಡುತ್ತಾರೆ. ಶಿವತಂದೆಯು ಬ್ರಹ್ಮನ ತನುವಿನಲ್ಲಿ ಸನ್ಮುಖದಲ್ಲಿ ಹೇಗೆ ಮಾತನಾಡುತ್ತಾರೆಂದು ನಿಮಗೆ ತಿಳಿದಿದೆ. ಮುದ್ದಾದ ಮಕ್ಕಳೇ, ನಾಟಕ ಈಗ ಪೂರ್ಣವಾಯಿತೆಂದು ಹೇಳುತ್ತಾರೆ. ಆತ್ಮವು ಈಗ ಕೇಳುತ್ತಿದೆ, ಇದು ಯಥಾರ್ಥವಾದ ಮಾತಾಗಿದೆ ಎಂದು ಆತ್ಮಕ್ಕೆ ತಿಳಿದಿದೆ. ಎಷ್ಟು ಸಾಧ್ಯವೋ ಅಷ್ಟು ನನ್ನೊಬ್ಬನನ್ನು ನೆನಪು ಮಾಡಿ ಮತ್ತು ಇಡೀ ಸೃಷ್ಟಿಯ ಜ್ಞಾನವನ್ನು ಕೊಡುತ್ತಿದ್ದೇನೆಂದು ತಂದೆಯು ಹೇಳುತ್ತಿದ್ದಾರೆ. ಕೆಲವರಿಗೆ ಚೆನ್ನಾಗಿ ಧಾರಣೆಯಾಗುತ್ತದೆ, ಕೆಲವರು ಮರೆತುಹೋಗುತ್ತಾರೆ. ನೀವೀಗ ಕುಳಿತಿದ್ದೀರಿ- ನಿಮಗೆ ಈ ಜ್ಞಾನಾಮೃತವನ್ನು ಕೊಡುತ್ತಿದ್ದೇನೆ ಅಥವಾ ಈ ವಿದ್ಯೆಯನ್ನು ನಿಮಗೆ ಓದಿಸುತ್ತಿದ್ದೇನೆ. ಶಿವತಂದೆಯು ಸನ್ಮುಖದಲ್ಲಿ ಕುಳಿತಿದ್ದಾರೆ, ಅವರು ಜನನ-ಮರಣದಲ್ಲಿ ಬರುವುದಿಲ್ಲ ಆದರೆ ನಿಮ್ಮದು ಜನ್ಮ-ಜನ್ಮದಲ್ಲಿಯೂ ನಾಮ, ರೂಪ, ದೇಶ, ಕಾಲ ಬದಲಾಗುತ್ತದೆ. ಚಿತ್ರವೂ ಸಹ ಸದಾಕಾಲ ಭಿನ್ನವಾಗಿರುವುದೇ ಸಿಗುತ್ತದೆ. ಇದು ಎಷ್ಟೊಂದು ಗುಹ್ಯ ಹಾಗೂ ಸೂಕ್ಷ್ಮವಾದ ಮಾತಾಗಿದೆ. ನಿಮ್ಮ ಆತ್ಮವು ಪದೇ-ಪದೇ ಒಂದು ಶರೀರವನ್ನು ಬಿಟ್ಟು ಇನ್ನೊಂದನ್ನು ತೆಗೆದುಕೊಂಡಾಗ ಅದರ ನಡುವಳಿಕೆ, ಸಂಕಲ್ಪ ಮುಂತಾದುವುಗಳೆಲ್ಲವೂ ಬದಲಾಗುತ್ತದೆ. ಆತ್ಮವು ಎಷ್ಟೊಂದು ಭಿನ್ನ-ಭಿನ್ನವಾದ ಪಾತ್ರವನ್ನು ಮಾಡಬೇಕಾಗುತ್ತದೆ. ಭಿನ್ನವಾದ ನಾಮ, ರೂಪ, ದೇಶ, ಕಾಲ ನಡುವಳಿಕೆಯಿಂದ ಪಾತ್ರವನ್ನು ಮಾಡಬೇಕಾಗುತ್ತದೆ. ಕೆಲವೊಮ್ಮೆ ರಾಜ, ಕೆಲವೊಮ್ಮೆ ಪ್ರಜೆ- ಈ ರೀತಿ ನಡುವಳಿಕೆಯು ಬದಲಾಗುತ್ತಿರುತ್ತದೆ. ಎಂದೂ ಸಹ ನಾಯಿ, ಬೆಕ್ಕು ಆಗುವುದಿಲ್ಲ. ಈಗ ನಾವು ಭವಿಷ್ಯದಲ್ಲಿ ರಾಜಕುಮಾರ-ರಾಜಕುಮಾರಿಯರಾಗುbವುದಕ್ಕಾಗಿ ಪುರುಷಾರ್ಥವನ್ನು ಮಾಡುತ್ತಿದ್ದೇವೆಂದು ನೀವು ಮಕ್ಕಳಿಗೆ ತಿಳಿದಿದೆ. ಮನುಷ್ಯರಿಂದ ದೇವತೆಗಳಾಗುತ್ತಿದ್ದೇವೆ. ಈ ಮಮ್ಮಾ-ಬಾಬಾರವರೂ ಸಹ ಪುರುಷಾರ್ಥ ಮಾಡುತ್ತಿದ್ದಾರೆ ನಂತರ ಭವಿಷ್ಯದಲ್ಲಿ ಹೋಗಿ ಲಕ್ಷ್ಮೀ-ನಾರಾಯಣರಾಗುತ್ತಾರೆ. ನಾವು ಎಷ್ಟು ನಮ್ಮ ಅದೃಷ್ಟವನ್ನು ರೂಪಿಸಿಕೊಳ್ಳುತ್ತೇವೆಯೋ ಅಷ್ಟು ಬಹಳ ಸುಖ ಸಿಗುತ್ತದೆ. ಇದು ಎಷ್ಟೊಂದು ಸಂಪಾದನೆಯಾಗಿದೆ. ಅವರು ಅಲ್ಪಕಾಲದ ಸುಖಕ್ಕಾಗಿ ವಿದ್ಯೆಯನ್ನು ಓದಿ ಈ ಜನ್ಮದಲ್ಲಿ ವಕೀಲರು ಮುಂತಾದವರಾಗುತ್ತಾರೆ ಮತ್ತೊಂದು ಜನ್ಮದ ಮಾತಿರುವುದಿಲ್ಲ. ಆದರೂ ಆಗದಿದ್ದರೂ ಓದಲೇಬೇಕು ಆದರೆ ನಾವು ಭವಿಷ್ಯದಲ್ಲಿ ಸ್ವರ್ಗದಲ್ಲಿ ಅವಶ್ಯವಾಗಿ ನಂತರ ಅಲ್ಲಿ ದೇವಿ-ದೇವತೆಗಳೆಂದು ಹೇಳಿಸಿಕೊಳ್ಳುತ್ತೇವೆ. ನಾವು ತಂದೆಯಿಂದ ಸ್ವರ್ಗದ ಸಿಂಹಾಸನದ ಅಧಿಕಾರವನ್ನು ತೆಗೆದುಕೊಳ್ಳುತ್ತೇವೆ ಎನ್ನುವುದನ್ನು ಎಂದೂ ಮರೆಯಬಾರದು, ಸರ್ವಶ್ರೇಷ್ಠರಾಗಿ ತೋರಿಸಬೇಕು. ಭಗವಂತನೇ ವಿದ್ಯೆಯನ್ನು ಓದಿಸುತ್ತಿದ್ದಾರೆಂದು ನಿಮ್ಮ ಬುದ್ಧಿಯಲ್ಲಿರಬೇಕು. ನಾವು ಚೆನ್ನಾಗಿ ಓದಿ 21 ಜನ್ಮಗಳಿಗಾಗಿ ಪ್ರಾಲಬ್ಧವನ್ನು ಮಾಡಿಕೊಳ್ಳುತ್ತಿದ್ದೇವೆ. ಈ ಸಮಯದಲ್ಲಿ ಎಷ್ಟು ಪುರುಷಾರ್ಥವನ್ನು ಮಾಡುತ್ತಿದ್ದೇವೋ ಅಷ್ಟು ಅದೃಷ್ಟವು ಶ್ರೇಷ್ಠವಾಗುತ್ತದೆ. ಆ ಅದೃಷ್ಟವೇ ಕಲ್ಪ-ಕಲ್ಪದಲ್ಲಿಯೂ ಇರುತ್ತದೆ, ಇದಕ್ಕಾಗಿ ಈ ಸಮಯ ಅದೃಷ್ಟವನ್ನು ರೂಪಿಸಿಕೊಳ್ಳಲು ಪುರುಷಾರ್ಥವನ್ನು ಮಾಡಬೇಕಾಗಿದೆ. ಶ್ರೇಷ್ಠ ಅದೃಷ್ಟವಾಗಿದೆ. ಬಹಳ ಶ್ರೇಷ್ಠ ಸುಖವಿದೆ. ಭಲೆ ಇಲ್ಲಿ ಕೆಲವರ ಬಳಿ ಕೋಟಿಗಟ್ಟಲೆ ಇರಬಹುದು ಆದರೆ ಇಲ್ಲಿ ಒಂದು ಪೈಸೆಯಷ್ಟೂ ಸುಖವಿಲ್ಲ. ಅಲ್ಲಿ ನಾವು ಶಾಂತಿ ಆರಾಮದಿಂದ ಭೋಗಿಸುತ್ತೇವೆ ಆದರೆ ಇಲ್ಲಿ ಎಷ್ಟೊಂದು ಅಪಾಯಗಳು ಬರುತ್ತವೆ. ಸ್ವಲ್ಪ ಸಮಯದಲ್ಲಿಯೇ ಬಹಳಷ್ಟು ದಿವಾಳಿಯಾಗುತ್ತಾರೆ, ಸಾಯುತ್ತಾರೆ. ಭಲೆ ಇನ್ಶೂರ್

ಮಾಡಿರುತ್ತಾರೆ ಆದರೆ ಇನ್ಶೂರೆನ್ಸ್ ಕಂಪನಿಯೂ ಸಹ ಏನು ಮಾಡುತ್ತಾರೆ? ಹಿರೋಶಿಮಾದ ಪರಿಸ್ಥಿತಿ ಏನಾಯಿತು! ಎಷ್ಟೊಂದು ಮನುಷ್ಯರು ಸತ್ತರು, ಇನ್ಶೂರೆನ್ಸ್ ಕಂಪನಿಯೇ ದಿವಾಳಿಯಾಯಿತು. ಇಲ್ಲಿಯೂ ಸಹ ಅದೇರೀತಿ ಆಗುತ್ತದೆ. ಎಲ್ಲರೂ ವಿನಾಶವಾಗುತ್ತಾರೆ, ಇನ್ಶೂರೆನ್ಸ್ ಕಂಪನಿಯವರು ಯಾರಿಗೆ ಹಣ ಕೊಡುತ್ತಾರೆ? ಪರಸ್ಪರದಲ್ಲಿ ಯಾರು ದೀಪವನ್ನು ಬೆಳಗಿಸುತ್ತಾರೆ?

ಮನುಷ್ಯರಲ್ಲಿ ಎಷ್ಟೊಂದು ಅಂಧವಿಶ್ವಾಸವಿದೆ! ದೊಡ್ಡ ವ್ಯಕ್ತಿಗಳನ್ನು ಪ್ರತ್ಯಕ್ಷ ಮಾಡುತ್ತಾರೆ. ಋಷಿ-ಮುನಿಗಳನ್ನು ಅವರಿಗಿಂತಲೂ ದೊಡ್ಡವರೆಂದು ತಿಳಿದುಕೊಳ್ಳುತ್ತಾರೆ. ಭಲೆ ಆಧ್ಯಾತ್ಮಿಕಕ್ಕೆ ಗೌರವ ಕೊಡುವುದಿಲ್ಲ ಆದರೆ ಸನ್ಯಾಸಿಗಳಿಗೆ ನಮಸ್ಕಾರ ಮಾಡುತ್ತಾರೆ. ಸಾಧುಗಳ ಮುಂದೆಹೋಗಿ ದೀರ್ಘದಂಡ ನಮಸ್ಕಾರ ಮಾಡುತ್ತಾರೆ ಆದರೆ ಸಾಧುಗಳು ಅವರ ಮುಂದೆ ಮಾಡುವುದಿಲ್ಲ ಏಕೆಂದರೆ ನಾವು ಶ್ರೇಷ್ಠ ಪವಿತ್ರರಾಗಿದ್ದೇವೆಂದು ತಿಳಿಯುತ್ತಾರೆ. ಆದರೆ ಇಲ್ಲಿ ನಾನು ನೀವು ಮಕ್ಕಳಿಗೆ ನಮಸ್ಕಾರ ಮಾಡುತ್ತೇನೆಂದು ನಾವು ಮುದ್ದಾದ ಮಕ್ಕಳಿಗೆ ಹೇಳುತ್ತಾರೆ. ನೀವೇ ನನ್ನ ತಲೆಯ ಕಿರೀಟವಾಗಿದ್ದೀರಿ. ನೀವು ವಿಶ್ವದ ಮಾಲೀಕರಾಗುತ್ತೀರಿ, ಬ್ರಹ್ಮಾಂಡಕ್ಕೂ ಮಾಲೀಕರಾಗುತ್ತೀರಿ, ನೀವೇ ಡಬಲ್ ಮಾಲೀಕರಾಗುತ್ತೀರಿ ಆದರೆ ನಾನು ಸಿಂಗಲ್ ಕೇವಲ ಬ್ರಹ್ಮಾಂಡಕ್ಕೆ ಮಾಲೀಕನಾಗುತ್ತೇನೆ. ಈ ರೀತಿಯ ಮಾತುಗಳನ್ನು ತಂದೆಯನ್ನು ಬಿಟ್ಟರೆ ಬೇರೆ ಯಾರೂ ಸಹ ತಿಳಿಸುವುದಿಲ್ಲ ಆದ್ದರಿಂದ ತಂದೆಯನ್ನು ನೆನಪು ಮಾಡಬೇಕು. ಅಂದಾಗ ನೋಡಿ, ಎಷ್ಟೊಂದು ಮಕ್ಕಳು ಇಲ್ಲಿಂದ ಹೋಗುತ್ತಾರೆ ಎಂದು ತಂದೆಯು ಹೇಳುತ್ತಾರೆ ನಂತರ ಆರುತಿಂಗಳಾದರೂ ತಂದೆಗೆ ಬಹಳ ಪರಿಶ್ರಮಪಟ್ಟು ಪತ್ರ ಬರೆಯುತ್ತಾರೆ. ಪ್ರಾಣ ಕೊಡುವಂತಹ ಪ್ರಾಣಕ್ಕಿಂತಲೂ ಪ್ರಿಯತಂದೆಗೆ ಪತ್ರವನ್ನೇ ಬರೆಯುವುದಿಲ್ಲ, ಸ್ತ್ರೀ-ಪುರುಷ ಒಬ್ಬರಿಗೊಬ್ಬರು ಪತ್ರವನ್ನು ಬರೆದಾಗ ಪ್ರಾಣೇಶ್ವರ ಇಂತಹವರೆಂದು ಹೇಳುತ್ತಾರೆ. ವಾಸ್ತವದಲ್ಲಿ ಅವರು ಪ್ರಾಣೇಶ್ವರರಲ್ಲ. ಪ್ರಾಣೇಶ್ವರನಂತೂ ಒಬ್ಬ ತಂದೆಯಾಗಿದ್ದಾರೆ. ಎಲ್ಲಾ ಪ್ರಾಣಗಳ ತಂದೆ ಒಬ್ಬರೇ ಆಗಿದ್ದಾರೆ. ಪ್ರಾಣೇಶ್ವರ ಮಕ್ಕಳೇ ಅರ್ಥಾತ್ ಪ್ರಾಣವನ್ನು ಉಳಿಸಿಕೊಳ್ಳುವಂತಹ ಈಶ್ವರನ ಮಕ್ಕಳೇ ಎಂದು ಹೇಳುತ್ತಾರೆ. ಪ್ರಾಣೇಶ್ವರ ಬಾಬಾ ನಮ್ಮ ಪ್ರಾಣವನ್ನು ಉಳಿಸುವಂತಹವರು ಎಂದು ಮಕ್ಕಳು ಹೇಳುತ್ತಾರೆ. ಇಲ್ಲಿಂದಲೇ ಈ ಹೆಸರು ಬರುತ್ತದೆ. ಭಾರತದಲ್ಲಿಯೇ ಈ ರೀತಿ ಪ್ರಾಣೇಶ್ವರ, ಪ್ರಾಣೇಶ್ವರಿ ಎಂದು ಬರೆಯುತ್ತಾರೆ ಆದರೆ ಯಾರೂ ಸಹ ಇಲ್ಲ. ಪ್ರಾಣಗಳ ದಾನವನ್ನು ತಂದೆಯೇ ಕೊಡುತ್ತಾರೆ. ನೀವು ನನ್ನವರಾಗಿದ್ದರೆ ನಿಮಗೆ ಯಾರೂ ದುಃಖವನ್ನು ಕೊಡಲು ಸಾಧ್ಯವಿಲ್ಲವೆಂದು ತಂದೆಯು ಹೇಳುತ್ತಾರೆ. ಆತ್ಮಕ್ಕೆ ದುಃಖ ಸಿಗುತ್ತದೆ, ಆತ್ಮವೇ ಅನುಭವ ಮಾಡುತ್ತದೆ. ತಂದೆಯು ಎಷ್ಟೊಂದು ಪ್ರೀತಿಯಿಂದ ತಿಳಿಸುತ್ತಾರೆ. ಅವರನ್ನೇ ನೆನಪು ಮಾಡುತ್ತದೆ ಮತ್ತು ಮಹಿಮೆ ಮಾಡುತ್ತದೆ. ಮಮ್ಮಾರವರನ್ನೂ ಸಹ ಎಷ್ಟೊಂದು ನೆನಪು ಮಾಡುತ್ತಾರೆ ಏಕೆಂದರೆ ಅವರು ಬಹಳ ಚೆನ್ನಾಗಿ ಸೇವೆ ಮಾಡಿದರು, ಎಷ್ಟೊಂದು ಶ್ರೇಷ್ಠಪದವಿಯು ಸಿಕ್ಕಿತು ನಂತರ ಸೆಕೆಂಡ್ ನಂಬರಿನಲ್ಲಿ ಸರ್ವೀಸ್ ಮಾಡಿರುವ ತಂದೆಯನ್ನು ಅನುಸರಿಸಬೇಕು. ನೀವು ಬಹಳ ವಿಶಾಲಹೃದಯಿಗಳಾಗಬೇಕು. ಹೇಗೆ ತಂದೆಯು ನಮ್ಮನ್ನು ಮಾಡಿದರು ಹಾಗೆಯೇ ನಾವೂ ಸಹ ಮಾಡಬೇಕು. ಸ್ವರ್ಗದ ಆಸ್ತಿಯು ಎಷ್ಟೊಂದು ದೊಡ್ಡ ಆಸ್ತಿಯು ಪ್ರಾಪ್ತಿಯಾಗಿದೆ. ಅಲ್ಲಿ ನಾವು ಇಷ್ಟೊಂದು ಸಾಹುಕಾರರಾಗುತ್ತೇವೆ ನಂತರ ಚಿನ್ನ, ವಜ್ರಗಳ ಮಹಲುಗಳನ್ನು ಮಾಡುತ್ತೇವೆ. ಒಂದು ಮಾಯಾ ಮಚ್ಚೆಂದರ್ನ ಆಟವನ್ನು ತೋರಿಸುತ್ತಾರೆ. ಅದರಲ್ಲಿ ಚಿನ್ನದ ಇಟ್ಟಿಗೆಗಳು ಬಿದ್ದಿರುತ್ತೆ ಅದರಲ್ಲಿ ಸ್ವಲ್ಪ ತೆಗೆದುಕೊಂಡು ಹೋಗಬೇಕೆಂದು ಯೋಚನೆ ಕೂಡಬರುತ್ತೆ. ನೀವು ಸಾಕ್ಷಾತ್ಕಾರದಲ್ಲಿಯೇ ಸ್ವರ್ಗದ ವಜ್ರ, ವೈಡೂರ್ಯಗಳ ಮಹಲುಗಳನ್ನು ನೋಡುತ್ತೀರಿ. ಚಿನ್ನದ ಗಣಿಗಳನ್ನು ನೋಡಿದಾಗ ಸ್ವಲ್ಪ ತೆಗೆದುಕೊಂಡು ಹೋಗುತ್ತೇವೆ ಎಂದು ಯೋಚಿಸುತ್ತೀರಿ. ಸೂಕ್ಷ್ಮವತನದಲ್ಲಿ ಚಿನ್ನವು ಸಿಗುವುದಿಲ್ಲ. ಚಿನ್ನವು ವೈಕುಂಠದಲ್ಲಿ ಇರುತ್ತದೆ. ಅಲ್ಲಿ ಗಣಿಗಳಿಂದ ನಾವು ವಿಮಾನಗಳಲ್ಲಿ ಹೋಗಿ ಚಿನ್ನವನ್ನು ತುಂಬಿಕೊಂಡು ಬರುತ್ತೇವೆಂದು ನೀವು ತಿಳಿದುಕ್ಕೊಳ್ಳುವಿರಿ. ಚಿನ್ನದ ದೊಡ್ಡ ದೊಡ್ಡ ಇಟ್ಟಿಗೆಗಳೂಸಹ ಇರುತ್ತೆ. ಈಗಲೂ ದೊಡ್ಡ ದೊಡ್ಡವರ ಬಳಿ ಅಪಾರಚಿನ್ನ ಇರುತ್ತದೆ. ಭಾರತವು ಚಿನ್ನ, ಬೆಳ್ಳಿಯನ್ನು ಅವಶ್ಯವಾಗಿ ಇಡಬೇಕಾಗಿದೆ, ಎಲ್ಲರ ಬಳಿ ಬಹಳ ದೊಡ್ಡ-ದೊಡ್ಡ ಗುಹೆಗಳನ್ನು ಮಾಡಿದ್ದಾರೆ, ಎಲ್ಲಿ ಯಾರೂ ಲೂಟಿ ಮಾಡಿಕೊಂಡು ಹೋಗದಿರಲೆಂದು. ಅಲ್ಲಿ ಬೆಂಕಿಯಿಂದಲೂ ಸುಡುವುದಿಲ್ಲಾ. ಅದೆಲ್ಲವೂ ಸಹ ಭವಿಷ್ಯದಲ್ಲಿ ನಿಮ್ಮ ಕೈಯಲ್ಲಿ ಬರುತ್ತದೆ. ವಿಮಾನ ಮುಂತಾದವುಗಳ ಮುಖಾಂತರ ಈಗ ಬಾಂಬ್ ಇತ್ಯಾದಿಗಳನ್ನು ಹಾಕುತ್ತಾರೆ. ವಿನಾಶಕ್ಕಾಗಿ ಅದೇ ವಸ್ತುಗಳನ್ನು ಉಪಯೋಗಿಸುತ್ತಾರೆ ನಂತರ ಅದೇ ಸುಖಕ್ಕಾಗಿ ನಿಮಿತ್ತವಾಗುತ್ತದೆ. ಸತ್ಯಯುಗದಲ್ಲಿ ಇದೆಲ್ಲವೂ ಇತ್ತು ಮತ್ತೆ ಪ್ರಾಯಃಲೋಪವಾಯಿತು. ಈಗ ಪುನಃ ಆಗುತ್ತದೆ. ಹೇಗೆ ಗಣಿಗಳಲ್ಲಿ ಹೋಗಿ ತೆಗೆದುಕೊಂಡು ಬರುತ್ತಾರೆಂದು ನಿಮಗೆ ಗೊತ್ತಿದೆ. ಗಣಿಗಳೆಲ್ಲವೂ ಸಹ ಹೊಸದಾಗುತ್ತವೆ ಆದರೆ ಈಗ ಹಳೆಯದಾಗಿದೆ ಅಂದಾಗ ಈ ರೀತಿ ಅದೃಷ್ಟವನ್ನು ರೂಪಿಸುವ ತಂದೆಯಿಂದ ಪೂರ್ಣ ಅದೃಷ್ಟವನ್ನು ತೆಗೆದುಕೊಳ್ಳಬೇಕು ಆದರೆ ಇದರಲ್ಲಿ ತಪ್ಪನ್ನು ಮಾಡಬಾರದು. ತಂದೆ ಮತ್ತು ಆಸ್ತಿಯನ್ನು ನೆನಪು ಮಾಡಬೇಕು. ಒಬ್ಬನಲ್ಲಿಯೇ ಮೋಹವನ್ನು ಇಟ್ಟುಕೊಳ್ಳಿ ಎಂದು ತಂದೆಯು ಹೇಳುತ್ತಾರೆ. ಸ್ವರ್ಗವನ್ನು ನೆನಪು ಮಾಡಿ. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಮರಳಿ ಸಿಕ್ಕಿರುವಂತಹ ಮಕ್ಕಳಿಗೆ ಪ್ರೀತಿಯ ಮಾತಾ-ಪಿತ ಬಾಪ್ದಾದಾರವರ ನೆನಪು ಪ್ರೀತಿ ಹಾಗೂ ಸುಪ್ರಭಾತ. ಆತ್ಮೀಯ ಮಕ್ಕಳಿಗೆ ಆತ್ಮೀಯ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ತಮ್ಮ ಶ್ರೇಷ್ಠ ಅದೃಷ್ಟವನ್ನು ಮಾಡಿಕೊಳ್ಳುವುದರಲ್ಲಿ ತಪ್ಪನ್ನು ಮಾಡಬಾರದಾಗಿದೆ. ಶ್ರೀಮತದಂತೆ ಚೆನ್ನಾಗಿ ನಡೆದು ವಿದ್ಯೆಯ ಆಧಾರದಿಂದ ಶ್ರೇಷ್ಠವಾದ ಅದೃಷ್ಟವನ್ನು ರೂಪಿಸಿಕೊಳ್ಳಬೇಕಾಗಿದೆ.

2. ಪ್ರಾಣೇಶ್ವರ ತಂದೆಯ ನೆನಪಿನಲ್ಲಿದ್ದು ಎಲ್ಲರಿಗೂ ಪ್ರಾಣದಾನ ಮಾಡಬೇಕಾಗಿದೆ. ಎಲ್ಲರ ಪ್ರಾಣವನ್ನು ಉಳಿಸಬೇಕಾಗಿದೆ. ಯಾರಿಗೂ ದುಃಖವನ್ನು ಕೊಡಬಾರದು.

ವರದಾನ: ಮಾಲೀಕತನದ ಸ್ಥಿತಿಯಲ್ಲಿರುತ್ತಾ ಪ್ರಕೃತಿಯ ಮುಖಾಂತರ ಸಹಯೋಗದ ಹಾರ ಹಾಕುವಂತಹ ಪ್ರಕೃತಿಜೀತ್ ಭವ

ಪ್ರಕೃತಿ ನೀವು ಮಾಲೀಕರಿಗೆ ಈಗಿನಿಂದಲೆ ಆಹ್ವಾನ ಮಾಡುತ್ತಿದೆ, ನಾಲ್ಕಾರುಕಡೆ ಪ್ರಕೃತಿಯ ತತ್ವ ಹಲ್-ಚಲ್ ಮಾಡುವುದು ಆದರೆ ಎಲ್ಲಿ ನೀವು ಪ್ರಕೃತಿಯ ಮಲೀಕರು ಇರುವಿರಿ ಅಲ್ಲಿ ಪ್ರಕೃತಿದಾಸಿಯಾಗಿ ಸೇವೆ ಮಾಡುವುದು ಕೇವಲ ನೀವು ಪ್ರಕೃತಿಜೀತ್ ಆಗಿಬಿಡಿ ಆಗ ಪ್ರಕೃತಿ ಸಹಯೋಗದ ಮಾಲೆ ಹಾಕುವುದು. ಎಲ್ಲಿ ನೀವು ಪ್ರಕೃತಿಜೀತ್ ಬ್ರಾಹ್ಮಣರು ಹೆಜ್ಜೆ ಇರಬಹುದು, ಸ್ಥಾನ ಇರಬಹುದು ಅಲ್ಲಿ ಯಾವುದೇ ನಷ್ಟ ಆಗಲು ಸಾಧ್ಯವಿಲ್ಲ. ಬಿರುಗಾಳಿ ಬರುವುದು, ಧರಣಿ ಅಲುಗಾಡಬಹುದು ಆದರೆ ಹೊರಗೆ ಶೂಲ ಇರಬಬಹುದು ಆದರೆ ಇಲ್ಲಿ ಮುಳ್ಳು ಇರಬಹುದು. ಎಲ್ಲರೂ ನಿಮ್ಮಕಡೆ ಸ್ಥೂಲ, ಸೂಕ್ಷ್ಮ ಆಶ್ರಯ ಪಡೆಯಲು ಓಡೋಡಿ ಬರುವರು.

ಸ್ಲೋಗನ್: ಅಲೌಕಿಕ ಸುಖ ಹಾಗೂ ಮನರಸದ ಅನುಭವ ಮಾಡಬೇಕಾದರೆ ಮನ್ಮನಾಭವದ ಸ್ಥಿತಿಯಲ್ಲಿರಿ.